ವಿಷಯ:- ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ರ್‍ಯಾಗಿಂಗ್

12(68)

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ನಡೆಯುತ್ತಿರುವ ರ್‍ಯಾಗಿಂಗ್ ಹಾವಳಿಯನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಆ) ಇದಕ್ಕೆ ಸಂಬಂಧಪಟ್ಟ ಪ್ರತ್ಯೇಕ ಕಾನೂನು ಜಾರಿಗೆ ತರಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) 1983ರ ಕರ್ನಾಟಕ ಶಿಕ್ಷಣ ಅಧಿನಿಯಮದ 116ನೇ ಪ್ರಕರಣದಲ್ಲಿ ರ್‍ಯಾಗಿಂಗ್‌ನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಸದರಿ ಅಧಿನಿಯಮದ 2(29)ನೇ ಪ್ರಕರಣದಲ್ಲಿ ರ್‍ಯಾಗಿಂಗ್ ಪದವನ್ನು ವ್ಯಾಖ್ಯಾನಿಸಲಾಗಿದೆ. 137ನೇ ಪ್ರಕರಣದ ರೀತ್ಯ ಸದರಿ ಅಪರಾಧವನ್ನು ನ್ಯಾಯಾಲಯವು ಸಂಜ್ಞೆಯಗೊಳಿಸಲಾಗಿದೆ. ಪೋಲೀಸ್ ನಿರೀಕ್ಷಕರ ಮಟ್ಟಕ್ಕಿಂತಲೂ ಹೆಚ್ಚಿನ ಅಧಿಕಾರಿಗಳು ಅಂತಹ ಅಪರಾಧದ ತನಿಖೆ ನಡೆಸಬೇಕಾಗಿದೆ. ಈ ಉಪಬಂಧಕ್ಕೆ ಪೂರಕವಾಗಿ ದಿನಾಂಕ 16-1-97 ಸಂ: ಇಡಿ 122 ಯುಆರ್‌ಸಿ 96ರ ಸುತ್ತೋಲೆಯನ್ನು ಹೊರಡಿಸಲಾಗಿದೆ.

ವಿಷಯ:- ರಾಜ್ಯದಲ್ಲಿರುವ ಖಾಸಗೀ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳು.

14(62)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಖಾಸಗೀ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು).

ಆ) ವೈದ್ಯಕೀಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಭಾರತೀಯ ವೈದ್ಯಕೀಯ ಮಂಡಳಿಯವರು ರೂಪಿಸಿರುವ ಮಾನದಂಡಗಳೇನು;

ಇ) ಈ ಮಾನದಂಡಗಳಿಗೆ ಅನುಗುಣವಾಗಿಲ್ಲದ ಕಾಲೇಜುಗಳ ಸಂಖ್ಯೆ ಎಷ್ಟು? (ವಿವರ ನೀಡುವುದು).

ಡಾ: ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):-

ಅ) 1. ಸರ್ಕಾರಿ ಕಾಲೇಜುಗಳು - 2

2. ಸರ್ಕಾರಿ ಸ್ವಾಯತ್ತ ಸಂಸ್ಥೆಗಳು ನಡೆಸುತ್ತಿರುವ ಕಾಲೇಜುಗಳು - 2 ಪಟ್ಟಿ ಲಗತ್ತಿಸಿದೆ.

3. ಖಾಸಗೀ ಕಾಲೇಜುಗಳು - 14

ಒಟ್ಟು 18

ಆ) ಭಾರತೀಯ ವೈದ್ಯ ಪರಿಷತ್ತಿನ ಮುಖ್ಯ ನಿಯಮಗಳು ಈ ಕೆಳಕಂಡಂತಿವೆ:-

ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿಯ ಪ್ರತಿಯೊಬ್ಬ ವಿದ್ಯಾರ್ಥಿಗೆ ಹೊಂದಿಕೊಂಡಿರುವ ಆಸ್ಪತ್ರೆಯಲ್ಲಿ ಏಳು ಹಾಸಿಗೆಗಳಿರಬೇಕು. ಮತ್ತು ಪ್ರತಿ ಹತ್ತು ವಿದ್ಯಾರ್ಥಿಗಳಿಗೆ ಒಬ್ಬರಂತೆ ಬೋಧಕರು ಪ್ರತಿ ವಿಭಾಗದಲ್ಲಿ ಇರಬೇಕು.

ಒಟ್ಟು 13 ಕಾಲೇಜುಗಳು ಈ ಮಾನದಂಡಗಳಿಗೆ ಪೂರ್ಣವಾಗಿ ಅನುಗುಣವಾಗಿರುವುದಿಲ್ಲ. ಕರ್ನಾಟಕ ಉಚ್ಚನ್ಯಾಯಾಲಯದ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ: 22316:96 ಪ್ರಕಾರ ಸರ್ಕಾರ ನಿಗಧಿಪಡಿಸಿದ ಪ್ರವೇಶ ಸಂಖ್ಯೆಗೆ ಅನುಗುಣವಾಗಿ ಕೆಳಗಿನ ವೈದ್ಯಕೀಯ ಕಾಲೇಜುಗಳು ವೈದ್ಯಕೀಯ ನಿಯಮಗಳನ್ನು ಪಾಲಿಸುತ್ತಿರುವುದಿಲ್ಲ.

1. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು
2. ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು
3. ಜಿ ಎಸ್ ಎಸ್ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು
4. ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ
5. ಎಂ.ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ
6. ಬಿಎಲ್‌ಡಿಇ ವೈದ್ಯಕೀಯ ಕಾಲೇಜು, ಬಿಜಾಪುರ
7. ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು
8. ಆಲ್-ಅಮೀನ ವೈದ್ಯಕೀಯ ಕಾಲೇಜು, ಬಿಜಾಪುರ
9. ಜೆಜೆ ಎಂ ವೈದ್ಯಕೀಯ ಕಾಲೇಜು, ದಾವಣಗೆರೆ
10. ಆದಿ ಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು
11. ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ
12. ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
13. ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.

LIST OF MEDICAL COLLEGES

GOVERNMENT MEDICAL COLLEGES - 2

1. Bangalore Medical College, Bangalore
2. Mysore Medical College, Mysore

GOVERNMENT AUTONOMOUS MEDICAL COLLEGES 2

1. Vijayanagar Institute of Medical Sciences, Bellary
2. Karnataka Institute of Medical Sciences, Hubli

PRIVATE MEDICAL COLLEGES - 14

1. Siddartha Medical College, Tumkur
2. Adichunchanagiri Institute of Medical Sciences, Bellur
3. B.L.D.E.A's Medical College, Bijapur
4. M.S. Ramaiah Medical College, Bangalore
5. J.J.M. Medical College, Davanagere
6. J.N. Medical College, Belgaum
7. Sri. Devaraja Urs Medical College Kolar
8. M.R. Medical College, Gulbarga
9. Al-Ameen Medical College, Bijapur
10. B.R. Ambedkar Medical College, Bangalore
11. St. John's Medical College, Bangalore
12. J.S.S. Medical College, Mysore
13. Kempegowda Institute of Medical Sciences, Bangalore
14. Kasturba Medical College, Manipal and Kasturba Medical College, Mangalore